ಶ್ರೀ ವಾಟಾಳ್ ನಾಗರಾಜ್ :- ಅಲ್ಲಿಯವರೆಗೆ ಸರ್ಕಾರ ಪಾಲಿಸಲಿ.

ಶ್ರೀ ಕೆ.ಎಸ್. ಈಶ್ವರಪ್ಪ :- ಬರೀ ಕೇಳಿ ಕೇಳಿ ಕನ್ನಡ ಉದ್ಧಾರ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ನಾನು ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ.

ಶ್ರೀ ಆರ್. ದಯಾನಂದರಾವ್ :- ಅವರು ಯಾವ ನಿಯಮದ ಪ್ರಕಾರ ಕೇಳುತ್ತಾರೆಂದು ನಮಗೆ ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ನಾನು ತಮ್ಮ ಅಪ್ಪಣೆಯನ್ನು ಪಡೆದುಕೊಂಡು ಮಾತನಾಡುತ್ತಿದ್ದೇನೆ. ತಮ್ಮ ಕಾರ್ಯಾಲಯಕ್ಕೆ ಬಂದಿದ್ದ. ತಾವು ನನಗೆ ಅನುಮತಿಯನ್ನು ಕೊಟ್ಟಿದ್ದೀರಿ. ಸರ್ಕಾರದ ನಿರ್ಧಾರ ಏನಿದೆ. ಅವರ ನೀತಿ ಏನಿದೆ. ಆ ನೀತಿಯನ್ನು ಕಾರ್ಯಗತ ಮಾಡಬೇಕು. ಆದ್ದರಿಂದ ನಾನು ಈಗ ಈ ಇಂಗ್ಲೀಷ್ ನಾಮಫಲಕಗಳಿಗೆಲ್ಲ ಕಪ್ಪು ಬಣ್ಣವನ್ನು ಬಳಿಯಬೇಕಾಗಿದೆ. ನಾನು ಈಗ ಕಪ್ಪು ಬಣ್ಣವನ್ನು ತಂದಿದ್ದೇನೆ. ಅದನ್ನು ಈ ಸದನಕ್ಕೆ ತೋರಿಸುತ್ತೇನೆ. ಈ ಕಪ್ಪುಬಣ್ಣ, ಕುಂಚ ಎರಡನ್ನೂ ಹಿಡಿದು ನಾನು ಈಗಲೇ ಮಾನ್ಯ ಮುಖ್ಯಮಂತ್ರಿಗಳ ಕಾರ್ಯಾಲಯದಿಂದ ಹಿಡಿದು ಎಲ್ಲಾ ಮಂತ್ರಿಗಳ ಕಾರ್ಯಾಲಯದ ಮುಂದೆ ಇರತಕ್ಕಂತಹ ಇಂಗ್ಲೀಷ್ ನಾಮಫಲಕಕ್ಕೆ ನಾನು ಕಪ್ಪು ಬಣ್ಣವನ್ನು ಬಳಿಯುವುದಕ್ಕೆ ಹೊರಟಿದ್ದೇನೆ. ಕನ್ನಡದ ಬಗ್ಗೆ ಬರೀ ಘೋಷಣೆಯಾಗಬಾರದು. ಇದು ಬಳಿಯುವುದಕ್ಕೆ ಇದು ಕಪ್ಪು ಬಣ್ಣ ! ಏಕೆಂದರೆ ಕನ್ನಡ ಅಂದ ಮೇಲೆ ಸರ್ಕಾರ ಇರಬೇಕಲ್ಲ, ಸರ್ಕಾರದ್ದು ಒಂದು ನೀತಿ ಇರಬೇಕಲ್ಲ, ಸುಮ್ಮನೆ ಬರೀ ನಾಮಫಲಕವನ್ನು ಹಾಕಿಬಿಟ್ಟರೆ ಆಗುವುದಿಲ್ಲ. ಅದಕ್ಕೆ ಕಪ್ಪುಬಣ್ಣವನ್ನು ಬಳಿಯುವುದಕ್ಕೆ ಹೊರಟಿದ್ದೇನೆ. ಕನ್ನಡದ ಬಗ್ಗೆ ಅಭಿಮಾನ ಇರುವಂತಹ ಮಂತ್ರಿಗಳು ನನ್ನ ಜೊತೆಯಲ್ಲಿ ಬನ್ನಿ. ನಿಮಗೆ ಕನ್ನಡದ ಬಗ್ಗೆ ಅಭಿಮಾನವಿದ್ದರೆ, ಇಲ್ಲ ಅಂತ ಅಂದರೆ ನೀವು ಇಲ್ಲೇ ಕುಳಿತುಕೊಳ್ಳಿ. ಮಂತ್ರಿಗಳು, ಶಾಸಕರು ಯಾರು ಬೇಕಾದರೂ ಬರಬಹುದು.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್, ಮಾನ್ಯ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಹಾಗೂ ಮಾನ್ಯ ಬಾಬಾಗೌಡ ರುದ್ರಗೌಡ ಪಾಟೀಲರು ಇಂಗ್ಲೀಷ್ ನಾಮಫಲಕಗಳಿಗೆ ಕಪ್ಪುಬಣ್ಣಗಳನ್ನು ಬಳಿಯುವುದಕ್ಕೆ ಹೋದರು.)

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ನಿನ್ನೆ ನಾನು ತಮ್ಮ ಅನುಮತಿಯನ್ನು ಪಡೆದು ಗೃಹಮಂಡಲಿಯ.....

ಅಧ್ಯಕ್ಷರು :- ತಾವು ಒಂದು ನಿಮಿಷ ಇರಿ. ವರದಿಯನ್ನು ಒಪ್ಪಿಸಿದ ಮೇಲೆ ತಾವು ಮಾತನಾಡಿ.

ವರದಿಯನ್ನೊಪ್ಪಿಸುವುದು

ಶ್ರೀ ಕೆ.ಹೆಚ್. ಹನುಮೇಗೌಡ :- ಮಾನ್ಯ ಅಧ್ಯಕ್ಷರೇ, ಅಂದಾಜು ಸಮಿತಿಯ ಅಧ್ಯಕ್ಷನಾದ ನಾನು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 231ರ ಮೇರೆಗೆ ಸಮಿತಿಯ ಪರವಾಗಿ ಕ್ಷಾಮಪರಿಹಾರ ಮಂಡಳಿಯ ರಚನೆಗೆ ಸಂಬಂಧಿಸಿದ ಎರಡನೆಯ ವಿಶೇಷ ವರದಿಯನ್ನು ಸದನದ ಮುಂದೆ ಇಡಬಯಸುತ್ತೇನೆ.

ಅಧ್ಯಕ್ಷರು :- ವರದಿಯನ್ನು ಒಪ್ಪಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ